# ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಸೇಡಂ.

## ಸಿಸಿ ನಂ.548/2022

ಫಿರ್ಯಾದಿಃ ಕರ್ನಾಟಕ ಸರಕಾರ ಪರಃ ಸೇಡಂ ಪೊಲೀಸ್ ಠಾಣೆ

-ಃಃ ವಿರುದ್ಧ ಃಃ-

ಆರೋಪಿ ಃ ದೇವು @ ದೇವಪ್ಪಾ ತಂದೆ ಕೃಷ್ಣಪ್ಪಾ ತಳವಾರ,
ವಃ 27 ವರ್ಷ, ಉಃ ವ್ಯಾಪಾರ,
ಸಾಃ ಕೊಡ್ಲಾ ಗ್ರಾಮ, ತಾಃ ಸೇಡಂ .

----

ದೋಷಾರೋಪಣೆ

ನಾನು ಶ್ರೀ ಬಾಲು, ಬಿ.ಎ.,ಎಲ್‌ಎಲ್‌ಬಿ., ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರು, ಸೇಡಂ, ನಿಮ್ಮ ಮೇಲೆ ಹೊರಿಸುವ ಆರೋಪವೇನೆಂದರೆ,

ದಿನಾಂಕ 03-03-2022 ರಂದು ರಾತ್ರಿ 10.30 ಗಂಟೆ ಸುಮಾರಿಗೆ ಸೇಡಂ ಪೋಲಿಸ ಠಾಣಾ ವ್ಯಾಪ್ತಿಯಲ್ಲಿ ಬರುವ ಕೊಡ್ಲಾ ಗ್ರಾಮದ ಚೌಡಮ್ಮ ಗುಡಿಯ ಹತ್ತಿರ ಶ್ರೀ ಸಿಮೆಂಟ ಕಂಪನಿಗೆ ಹೋಗುವ ಸಿಸಿ ರಸ್ತೆಯಲ್ಲಿ ಚಾಸಾ ನಂ 1 ನೇದ್ದವನು ಶ್ರೀ ಸಿಮೆಂಟ ಕಂಪನಿಗೆ ಬರುವ ಲಾರಿಗಳು ಅಲ್ಲಿ ರಸ್ತೆಯಲ್ಲಿ ಅಡ್ಡಾದಿಡ್ಡಿಯಾಗಿ ನಿಲ್ಲಿಸಿದ್ದನ್ನು ತೆಗೆಸುವಾಗ ಆರೋಪಿ ನಂ 1 ನೆದ್ದವನು ಚಾಸಾ ನಂ 1 ನೆದ್ದವನಿಗೆ ನೀನು ಇಲ್ಲಿ ನಮ್ಮ ದಾಬಾದ ಹತ್ತಿರ ನಿಂತ ಲಾರಿಗಳನ್ನು ಯಾಕೆ ತೆಗೆಯಿಸುತ್ತಿದ್ದಿ ಇದರಿಂದ ನಮ್ಮ ವ್ಯಾಪಾರಕ್ಕೆ ನಷ್ಟವಾಗಿದೆ ಅಂತ ಜಗಳ ತೆಗೆದು ಚಾಸಾ 1 ನೆದ್ದವನಿಗೆ ತಡೆದು ನಿಲ್ಲಿಸಿದ್ದು ಆ ಮೂಲಕ ಆರೋಪಿತರಾದ ನೀವು ಭಾ.ದಂ.ಸಂ. ಕಲಂ 341 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧಗಳನ್ನು ಮಾಡಿರುತ್ತೀರಿ, ಅದು ನನ್ನ ಸಂಜ್ಞೆತೆಗೆ ಬಂದಿರುತ್ತದೆ.

ಎರಡನೆಯದಾಗಿ ಮೇಲೆ ಹೇಳಲಾದ ದಿನ, ಸಮಯ ಮತ್ತು ಸ್ಥಳದಲ್ಲಿ ಆರೋಪಿತನಾದ ನೀನು ಚಾಸಾ 1 ರವರನ್ನು ತಡೆದು ನಿಲ್ಲಿಸಿ ಕೈಯಿಂದ ಬಲಗಡೆ ಗಲ್ಲಕ್ಕೆ , ತಲೆಗೆ , ಬೆನ್ನಿಗೆ ಹೊಡೆಯುವಾಗ ಇದನ್ನು ನೋಡಿ ಚಾಸಾ ನಂ 4 ನೆದ್ದವನು ಹೊಡೆಯಬೇಡ ಅಂತ ಬಿಡಿಸಲು ಅಡ್ಡ ಹೋದಾಗ ಚಾಸಾ 1 ನೆದ್ದವನಿಗೆ ಹೊಡೆಯುವ ಏಟು ಚಾಸಾ 4 ನೆದ್ದವನಿಗೆ ಬಾಯಿಗೆ ಮತ್ತು ಬಲ ಗಲ್ಲಕ್ಕೆ ಕೈ ಏಟು ತಗುಲಿ ಬಾಯಿಗೆ ರಕ್ತಗಾಯವಾಗಿದ್ದು ಆ ಮೂಲಕ ಆರೋಪಿತರಾದ ನೀವು ಭಾ.ದಂ.ಸಂ. ಕಲಂ 323 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧಗಳನ್ನು ಮಾಡಿರುತ್ತೀರಿ, ಅದು ನನ್ನ ಸಂಜ್ಞೆತೆಗೆ ಬಂದಿರುತ್ತದೆ.

ಮೂರನೆಯದಾಗಿ ಮೇಲೆ ಹೇಳಲಾದ ದಿನ, ಸಮಯ ಮತ್ತು ಸ್ಥಳದಲ್ಲಿ ಆರೋಪಿತನಾದ ನೀನು ಚಾಸಾ 1 ರವರನ್ನು ತಡೆದು ನಿಲ್ಲಿಸಿ ಭೋಸಡಿ ಮಗನೆ ಸೂಳಿ ಮಗನೆ ನೀನು ಇಲ್ಲಿ ನಮ್ಮ ದಾಬಾ ಹತ್ತಿರ ನಿಂತ ಲಾರಿಗಳನ್ನು ಯಾಕೆ ತೆಗೆಸುತ್ತಿದ್ದಿ ಇದರಿಂದ ನಮ್ಮ ದಾಬಾಕ್ಕೆ ಊಟಕ್ಕೆ ಯಾರು ಲಾರಿ ಚಾಲಕರುಗಳು ಬರುತ್ತಿಲ್ಲಾ ನಿನ್ನಿಂದ ನಮ್ಮ ದಂಧೆ ಲಾಸಾಗುತ್ತಿದೆ ಅಂತಾ ಆತನ ಸಂಗಡ ಜಗಳ ತೆಗೆದು ಭೋಸಡಿ ಮಗನೆ ಎಲ್ಲಿಗೆ ಹೋಗುತ್ತಿ ಅಂತ ಅವಾಚ್ಯ ಶಬ್ದಗಳಿಂದ ಬೈದು ಸಾರ್ವಜನಿಕ ಶಾಂತತೆಗೆ ಭಂಗ ಉಂಟು ಮಾಡಿದ್ದು ಆ ಮೂಲಕ ಆರೋಪಿತರಾದ ನೀವು ಭಾ.ದಂ.ಸಂ. ಕಲಂ 504 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧಗಳನ್ನು ಮಾಡಿರುತ್ತೀರಿ,

ಅದು ನನ್ನ ಸಂಜ್ಞೆತೆಗೆ ಬಂದಿರುತ್ತದೆ.

ಕೊನೆಯದಾಗಿ ಮೇಲೆ ಹೇಳಲಾದ ದಿನ, ಸಮಯ ಮತ್ತು ಸ್ಥಳದಲ್ಲಿ ಆರೋಪಿತನು ಚಾಸಾ ನಂ 1 ನೆದ್ದವರಿಗೆ ಜಗಳ ತೆಗೆದು ಹೊಡೆಬಡೆ ಮಾಡಿದ ನಂತರ ಈ ಬಗೆಗೆ ಪೋಲೀಸ್ ಕೇಸು ಗೀಸು ಮಾಡಿದರೆ ಜೀವಂತ ಬಿಡುವುದಿಲ್ಲ ಖಲಾಸ್ ಮಾಡುವುದಾಗಿ ಜೀವದ ಭೆದರಿಕೆ ಹಾಕಿದ್ದು ಆ ಮೂಲಕ ಆರೋಪಿತರಾದ ನೀವು ಭಾ.ದಂ.ಸಂ. ಕಲಂ 506 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧಗಳನ್ನು ಮಾಡಿರುತ್ತೀರಿ, ಅದು ನನ್ನ ಸಂಜ್ಞೆತೆಗೆ ಬಂದಿರುತ್ತದೆ.

ಕಾರಣ ಮೇಲೆ ಹೇಳಿದ ಅಪರಾಧಗಳಿಗಾಗಿ ವಿಚಾರಣೆ ಎದುರಿಸಬೇಕೆಂದು ನಿರ್ದೇಶಿಸುತ್ತಿದ್ದೇನೆ.

ಸಹಿ/-

ದಿನಾಂಕಃ 22-10-2024 ಪ್ರ.ದ.ನ್ಯಾದಂ. ಸೇಡಂ.

## ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಸೇಡಂ.

**ಸಿಸಿ ನಂ.548/2022**

ಫಿರ್ಯಾದಿಃ ಕರ್ನಾಟಕ ಸರಕಾರ ಪರಃ ಸೇಡಂ ಪೊಲೀಸ್ ಠಾಣೆ

-ಃಃ ವಿರುದ್ಧ ಃಃ-

ಆರೋಪಿ ಃ ದೇವು @ ದೇವಪ್ಪಾ ತಂದೆ ಕೃಷ್ಣಪ್ಪಾ ತಳವಾರ,
ವಃ 27 ವರ್ಷ, ಉಃ ವ್ಯಾಪಾರ,
ಸಾಃ ಕೊಡ್ಲಾ ಗ್ರಾಮ, ತಾಃ ಸೇಡಂ .

ಆರೋಪಿತರ ಹೇಳಿಕೆ

ಪ್ರಃ-1) ಈ ಓದಿ ಹೇಳಲಾದ ದೋಷಾರೋಪಣೆಯನ್ನು ಕೇಳಿ ತಿಳಿದುಕೊಂಡಿರುವಿರಾ?

ಉಃ

ಪ್ರಃ-2) ನಿನ್ನ ತಪ್ಪನ್ನು ಒಪ್ಪಿಕೊಳ್ಳುತ್ತಿಯೋ ಅಥವಾ ವಿಚಾರಣೆ ನಡೆಯಬೇಕಾ?

ಉಃ

(ದೋಷಾರೋಪಣೆಯನ್ನು ಆರೋಪಿತರಿಗೆ ಓದಿ ಹೇಳಿದ್ದು, ಅವರು ನೀಡಿದ ಹೇಳಿಕೆಯನ್ನು ಯಥಾವತ್ತಾಗಿ ದಾಖಲಿಸಿದ್ದು,
ಅದು ಸಂಪೂರ್ಣ ಸತ್ಯವಾಗಿರುತ್ತದೆಂದು ಪ್ರಮಾಣೀಕರಿಸುತ್ತೇನೆ)

ಸಹಿ/-

ದಿನಾಂಕ 22-10-2024 ಪ್ರ.ದ.ನ್ಯಾದಂ. ಸೇಡಂ.